7

# ಯೇಸು: ಐತಿಹಾಸಿಕವಾದವನು

ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ಯೇಸುವು ನೆರವೇರಿಸಿದ್ದನ್ನು ವಿವರ ವಾಗಿ ಹೇಳುವ ಹೊಸ ಒಡಂಬಡಿಕೆಯ ಪುಸ್ತಕಗಳು ನಂಬಲರ್ಹವಾದವುಗಳೋ? ಯೇಸುವು ನಜರೇತಿನ ಬಡಗಿಯವನು, ಪ್ರಥಮ ಶತಮಾನದಲ್ಲಿ ನಿಜವಾಗಿಯೂ ಜೀವಿಸಿದನು ಎಂಬದನ್ನು ಈ ಶತಮಾನದಲ್ಲಿ ಒಬ್ಬನು ಹೇಗೆ ತಿಳಿಯಬಲ್ಲನು? ಆತನ ಆಶ್ಚರ್ಯ ಕರವಾದ ಜೀವಿತದ ಕಥೆಯು ಕೇವಲ ಆತುರದ ಯೋಚನೆ ಯಾಗಿರುವುದೋ? ಆದಿ ಕ್ರೈಸ್ತರು ಅಂಥ ವ್ಯಕ್ತಿಯು ದೇಹಧಾರಿಯಾಗಿ ಅವರೊಂದಿಗೆ ಇದ್ದದ್ದನ್ನು ಮತ್ತು ಆತನ ಮಹಿಮೆಯನ್ನು ಅವರು ನೋಡಿದ್ದನ್ನು ಒಪ್ಪಿಕೊಂಡರು. ಹಾಗಿದ್ದರೂ ಮಾನವ ಜನಾಂಗದ ಮಹಿಮೆಯುಳ್ಳ ಆದರ್ಶವನ್ನು ಮಾತ್ರ ಕಲ್ಪಿಸುತ್ತಿರುವರೆ?

ಯೇಸುವಿನ ಖಚಿತವಾದ ಜೀವನದ ನಾಲ್ಕು ಸುವಾರ್ತಾ ವಿವರಣೆಗಳು, ಅವಿಶ್ವಾಸಿಗಳ ತೀರ್ಮಾನದಿಂದ ಸೂಕ್ಷ್ಮ ಪರೀಕ್ಷೆಯ ನಂತರ, ಅಸ್ತಿತ್ವದಲ್ಲಿ ಬಹಳ ಅಧಿಕೃತ ಐತಿಹಾಸಿಕ ದಾಖಲೆಗಳಾಗಿವೆ.[1] ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನರು ದಂತ ಕಥೆಯ ಯೇಸುವಿನ ಹಿಂಬಾಲಕರಾಗಿ ಮೋಸ ಹೊಂದಿದವರಾಗಿದ್ದರೆಂದು ತಿಳಿದು ಕೊಂಡಿದ್ದರೆ, ಅಂಥವರು ಕ್ರೈಸ್ತೇತರರ ಹೇಳಿಕೆ ಗಳನ್ನು ಕೇಳಿದರೆ ಅಂಥ ತಿಳುವಳಿಕೆಯು ಬಿದ್ದುಹೋಗುವುದು. ಮೊದಲಿನ ಶತಮಾನಗಳಿಂದ ಅನೇಕ ಕ್ರೈಸ್ತೇತರ ಉಲ್ಲೇಖಗಳು ಲಭ್ಯವಿರುವದಿಲ್ಲ, ಆದರೆ ಯೇಸುವಿನ ಬಗೆಗಿನ ಕೆಲವೇ ಹೇಳಿಕೆಗಳು ಆತನು ನಿಜವಾಗಿಯೂ ಜೀವಿಸಿದ್ದನು ಎಂಬ ಸತ್ಯದ ನಿಶ್ಚಿತವಾದ ಪ್ರದರ್ಶನಗಳಾಗಿರುತ್ತವೆ.[2]

## ಫ್ಲೆವಿಯಸ್ ಜೊಸೆಫಸ್

ಫ್ಲೆವಿಯಸ್ ಜೊಸೆಫಸನು ಪಂಡಿತನಾದ ಫರಿಸಾಯನಾಗಿದ್ದನು. ಸಭೆಯು ಪ್ರಾರಂಭವಾದ ಏಳು ವರ್ಷಗಳ ನಂತರ ಜನಿಸಿದ್ದನು. ಹೊಸ ಒಡಂಬಡಿಕೆಯು ಸಂಪೂರ್ಣಗೊಂಡ ನಂತರದ ವರೆಗೆ ಜೀವಿಸಿದ್ದನು. ಅವನು ಕ್ರೈಸ್ತನಾಗಿರಲಿಲ್ಲ. ಆದರೆ ಯೇಸುವಿಗಾಗಿ ಭಕ್ತಿಯುಳ್ಳ ಗೌರವವಿತ್ತು:

> ಈ ಸಮಯದಲ್ಲಿ ಆತನನ್ನು ಮನುಷ್ಯನು ಎಂದು ಕರೆಯುವುದು ಕಾನೂನು ಬದ್ಧವಾಗಿದ್ದರೆ, ಒಬ್ಬ ಜ್ಞಾನಿಯಾದ ಮನುಷ್ಯನು, ಯೇಸುವು ಇದ್ದನು; ಯಾಕಂದರೆ ಆತನು ಅದ್ಭುತ ಕಾರ್ಯಗಳನ್ನು ಮಾಡುವಾ ತನಾಗಿದ್ದನು, ಆನಂದದಿಂದ ಸತ್ಯವನ್ನು ಸ್ವೀಕರಸುವಂಥ ಜನರಿಗೆ ಬೋಧ ಕನಾಗಿದ್ದನು. ಯೆಹೂದ್ಯರಲ್ಲಿ ಅನೇಕರನ್ನೂ, ಅನ್ಯಜನರಲ್ಲಿ ಅನೇಕರನ್ನೂ ತನ್ನ ಬಳಿಗೆ ಸೆಳೆದುಕೊಂಡಿದ್ದನು. ಆತನು ಕ್ರಿಸ್ತನಾಗಿದ್ದನು. ನಮ್ಮಲ್ಲಿಯ ಪ್ರಮುಖ ಜನರ ಸೂಚನೆಯಂತೆ ಪಿಲಾತನು ಆತನನ್ನು ಶಿಲುಬೆಯ ಮರಣಕ್ಕೆ

> ಒಪ್ಪಿಸಿದಾಗ, ಮೊದಲು ಆತನನ್ನು ಪ್ರೀತಿಸಿದವರು ಆತನನ್ನು ಮರೆತು ಬಿಡಲಿಲ್ಲ; ಯಾಕಂದರೆ ಆತನನ್ನು ಕುರಿತು ದೈವಿಕ ಪ್ರವಾದಿಗಳು ಮುಂತಿಳಿಸಿದ ಇವುಗಳನ್ನು ಮತ್ತು ಇತರ ಹತ್ತು ಸಾವಿರ ಅದ್ಭುತ ಸಂಗತಿಗಳಂತೆ ಆತನು ಮೂರನೆಯ ದಿನ ಪುನಃ ಅವರಿಗೆ ಜೀವಂತನಾಗಿ ಕಾಣಿಸಿಕೊಂಡನು. ಆತನಿಂದ ಕ್ರೈಸ್ತರು ಎಂದು ಹೆಸರು ಹೊಂದಿದ ಜನರು ಈ ದಿನದಲ್ಲಿ ಅಳಿದು ಹೋಗಿರುವದಿಲ್ಲ.[3]

ಗೌರವದಿಂದ ಕೂಡಿಕೊಂಡು, ಪದಗಳ ಉಪಯೋಗದಲ್ಲಿ ಅಜಾಗರೂಕತೆಯು ಹಿಂದಿನ ಹೇಳಿಕೆಯಲ್ಲಿ ಜೊಸೆಫಸ್‌ನ ಗುಣಲಕ್ಷಣವಾಗಿದೆ. ಯಾಕಂದರೆ ಸುವಾರ್ತೆಯ ಘಟನೆಗಳಲ್ಲಿ ನಂಬಿಕೆಯ ಪ್ರಭಾವವನ್ನು ಅವನು ಬಿಟ್ಟಿದ್ದಾನೆ.[4] ಅವನ ನಿಜವಾದ ನಂಬಿಕೆಯು ಅನಂತರದ ಪುಸ್ತಕದಲ್ಲಿ ಕಂಡು ಬರುತ್ತದೆ, ಅದು ಸರಿಪಡಿಸಲು ಸಹಾಯ ಮಾಡಿದೆ; ಆ ಬರಹವು ಯೇಸುವನ್ನು "ಕ್ರಿಸ್ತ ಎಂದು ಕರೆಯಲ್ಪಟ್ಟ"[5] ಒಬ್ಬಾತನಂತೆ ಉಲ್ಲೇಖಿಸುತ್ತದೆ.

ಯೇಸುವಿನ ದೈವತ್ವದಲ್ಲಿ ಜೊಸೆಫಸನು ನಂಬಲಿಲ್ಲ ಎಂಬ ಪುರಾವೆಯು ಬಲವಾದದ್ದಾಗಿದೆ ಆದರೆ ಮೊದಲನೆಯ ಶತಮಾನದಲ್ಲಿ ನಜರೇತಿನ ಯೇಸುವು ಜೀವಿಸಿದನೆಂದು ಅವನು ನಂಬಿದ್ದನೆಂಬ ಪುರಾವೆಯು ಅಷ್ಟೇ ಬಲವಾದದ್ದಾಗಿದೆ. ಕ್ರೈಸ್ತರ "ಗೋತ್ರ"ದಿಂದ ಹೊರಗಿರುವ ಒಬ್ಬನ ಅಭಿಪ್ರಾಯದಿಂದ ಜೊಸೆಫಸನ ಮಾತುಗಳು ಯೇಸುವನ್ನು ದಂತ ಕಥೆಯ ಪಾತ್ರದಂತೆ ದೃಷ್ಟಿಸುವ ಯಾವನಿಗೇ ಆಗಲಿ ಅವನಿಗೆ ವಿರುದ್ಧವಾಗಿ ಸಾಕ್ಷಿಕೊಡುತ್ತವೆ.

## ತಾಲ್ಮೂದಗಳು

ತಾಲ್ಮೂದಗಳು (ಎರಡು ಭಾಗಗಳಲ್ಲಿ, ಮಿಷ್ನಾ ಮತ್ತು ಗೆಮಾರಾ) ಎಂದು ಕರೆಯಲ್ಪಡುವ ಮೊದಲು ಐದು ಶತಮಾನಗಳ ವಿಶಾಲವಾದ ಯೆಹೂದಿ ಬರಹಗಳು ಯೇಸುವಿನ ಬಗ್ಗೆ ಮಾತಾಡುತ್ತವೆ. ನಿರೀಕ್ಷಿಸಲ್ಪಡುವಂತೆ ಉಲ್ಲೇಖಗಳು ವಿರಳವಾದವುಗಳೂ ವಿರುದ್ಧವಾದವುಗಳೂ ಇರುತ್ತವೆ; ಆದರೆ ನಿಜವಾದ ಯೇಸು - ಅಲ್ಲ ಎಂಬ ಭಾವನೆಯನ್ನು ತಾಲ್ಮೂದಗಳು ಅಲ್ಲಗಳೆಯುತ್ತವೆ.[6] "ನಜರೇತಿನ ಯೇಸು, ಮರಿಯಳ ಮಗ, ಎಲಿಯ ಮಗಳು" ಎಂದು ಅವು ಮಾತಾಡುತ್ತವೆ.[7] ಐಗುಪ್ತಕ್ಕೆ ಆತನ ಪ್ರಯಾಣದ ಬಗ್ಗೆ ಹೇಳುತ್ತವೆ ಹಾಗೂ ಆತನ ಅದ್ಭುತಕರವಾದ ಸಾಮರ್ಥ್ಯವನ್ನು ಗುರುತಿಸುತ್ತವೆ. ಹಾಗಿದ್ದರೂ ಅವರು ಆತನ ಶಕ್ತಿಯನ್ನು ದೇವಾಲಯದಿಂದ ದೇವರ ಹೆಸರಿನ ಸರಿಯಾದ ಉಚ್ಚಾರವನ್ನು ಕದ್ದುಕೊಂಡದ್ದರ ಬಗ್ಗೆ ಇಲ್ಲವೇ ಆತನು ಐಗುಪ್ತದ ಮಂತ್ರ ವಿದ್ಯೆಯನ್ನು ರೂಢಿಸುವದಕ್ಕೆ ಹೊರಿಸುತ್ತಾರೆ. ಮತ್ತಾಯ, ತದ್ದಾಯ, ಜಾನಿ ಎಂಬ ಹೆಸರಿದ್ದವನ ಹಾಗೂ ನಿಕೊದೇಮನ ಹೆಸರುಗಳನ್ನೊಳಗೊಂಡು ಯೇಸುವಿನ ಹಿಂಬಾಲಕರ ನಿರ್ದಿಷ್ಟವಾದ ಹೆಸರುಗಳು ಹೇಳಲ್ಪಟ್ಟಿವೆ. ಪಸ್ಕಾಹಬ್ಬದ ಶಿಲುಬೆಯ ವಿಷಯವು ಬಿಡಲ್ಪಟ್ಟಿಲ್ಲ, ಆದರೆ ಎಲ್ಲಾ ಉಲ್ಲೇಖಗಳು ಮಂತ್ರ ವಿದ್ಯೆ, ಭ್ರಷ್ಟತೆಯುಳ್ಳವನೆಂದು ಯೇಸುವನ್ನು ದೂರುವ, ದುಷ್ಟ ವ್ಯಂಗ್ಯ ಸೂಚನೆಗಳೊಂದಿಗೆ ಉಲ್ಲೇಖಗಳಿವೆ.[8]

ವ್ಯಂಗವಾಗಿ, ರಬ್ಬಿಗಳು ಯೇಸುವನ್ನು "ಮರಕ್ಕೆ ನೇತು ಹಾಕಲ್ಪಟ್ಟವನು" ಹಾಗೂ "ಕನ್ಯಕೆಯ ಮಗನು" ಎಂದು ಸಂಬಂಧಿಸಿ ಹೇಳಿದರು.[9] "ಸುವಾರ್ತೆ" ಎಂಬ ಪದದ ಮೇಲೆ ಅಪಹಾಸ್ಯ ಮಾಡಿದರು. ತಮ್ಮ ಭಾಷೆಯಲ್ಲಿ ಅದರ ಅರ್ಥ,

“ಕೊನೆಯಲ್ಲಿದ್ದವರ ಅಪರಾಧ,” ಇಲ್ಲವೇ “ಬರೆಯುವ ಹಲಿಗೆಯ ಪಾಪ” ಎಂದಾಗುವ ರೀತಿಯಲ್ಲಿ ಕೇಳುವಂತೆ ಮಾಡಿದನು.[10] ಯಾವಾಗಲಾದರೂ ಅವರಿಗೆ ದಂತ ಕಥೆಯ ಯೇಸುವಿನ ವಿಚಾರವಿದ್ದರೆ, ನಿಶ್ಚಯವಾಗಿಯೂ ಅವರ ದಾಳಿಗಳು ಭಿನ್ನವಾಗಿರುತ್ತಿದ್ದವು. ಆದರೆ ಪ್ರತಿಯೊಂದು ಅಪಹಾಸ್ಯವು ನಜರೇತಿನ ಬಡಗಿಯ ವಾಸ್ತವಿಕತೆಯಲ್ಲಿ ನೆಲೆಗೊಂಡಿತ್ತು.

## ಕೊರ್ನೆಲಿಯಸ್ ಟ್ಯಾಸಿಟಸ್

ರೋಮ್ ಸಾಮ್ರಾಜ್ಯದ ಅತೀ ಪ್ರಸಿದ್ಧನಾದ ಇನ್ನೊಬ್ಬ ಚರಿತ್ರೆಗಾರನು ಕೊರ್ನೆಲಿಯಸ್ ಟ್ಯಾಸಿಟಸ್. ಸುಮಾರು ಕ್ರಿ.ಶ. 110ರ ಸುಮಾರಿಗೆ ಅವನು ನೀರೋನ ಯುಗದಲ್ಲಿ (ಕ್ರಿ.ಶ. 54-68) ರೋಮ್‌ದ ಮೂರನೆಯ ಭಾಗವು ಸುಡಲ್ಪಟ್ಟದ್ದರ ವಿವರವನ್ನು ಬರೆದನು. 64ರ “ಮಹಾ ಬೆಂಕಿಗೆ” ನೀರೋ ತಾನೇ ಕಾರಣ ಎಂದು ಕೆಲವು ರೋಮನ್‌ರು ಹೇಳಿದ್ದರಿಂದ ಆ ದೂರನ್ನು ವಿರೋಧಿಸಲು ನಿರ್ಣಯಿಸಿದರು. ತನ್ನ ವರದಿಯ ಭಾಗವಾಗಿ, ಟ್ಯಾಸಿಟಸ್ ಹೀಗೆ ಬರೆದನು,

> ಆದುದರಿಂದ, ವದಂತಿಯನ್ನು ತಡೆಗಟ್ಟಲು ಅಪರಾಧಿಗಳನ್ನು ಬದಲಾಯಿಸಿದನು, ತಮ್ಮ ದುಷ್ಟ ಕಾರ್ಯಗಳಿಗಾಗಿ ಅಸಹ್ಯಿಸಲ್ಪಟ್ಟ, ಕ್ರೈಸ್ತರು ಎಂದು ಜನಸಮೂಹವು ಕರೆದ, ಜನರ ಒಂದು ಗುಂಪನ್ನು ಅತೀ ಕ್ರೂರವಾಗಿ ಹಿಂಸಿಸಿದನು. ಕ್ರಿಸ್ತುಸ್ ಎಂಬಾತನಿಂದ ಅವರು ತಮ್ಮ ಹೆಸರನ್ನು ಹೊಂದಿದ್ದರು. ಆತನು ಟಿಬೆರಿಯನ್‌ನು ಮಹಾ ರಾಜನಾಗಿದ್ದಾಗ ದೇಶಾಧಿಪತಿ ಪೊಂತಿಯಸ್ ಪಿಲಾತನ ತೀರ್ಪಿನಿಂದ ಕೊಲ್ಲಲ್ಪಟ್ಟನು; ಹಾಗೂ ಈ ದುಷ್ಟ ಅಂಧಶ್ರದ್ಧೆಯು ಸ್ವಲ್ಪ ಸಮಯ ನಿಯಂತ್ರಣಕ್ಕೆ ತರಲ್ಪಟ್ಟಿತು; ಆದರೆ ಇದು ಪುನಃ ಯುದಾಯದಲ್ಲಿ, ಅದು ಪ್ರಾರಂಭವಾದ ಸ್ಥಳದಲ್ಲಿ ಮಾತ್ರವೇ ಅಲ್ಲ ರೋಮ್‌ದಲ್ಲಿಯೂ ಹೊಸದಾಗಿ ಬೆಳೆಯಲು ಪ್ರಾರಂಭಿಸಿತು. ರೋಮ್ ದಲ್ಲಿ ಎಲ್ಲಾ ಭಯಂಕರವಾದ ಹಾಗೂ ಜಗತ್ತಿನಲ್ಲಿಯ ನಾಚಿಕೆಗೇಡಿತನದ ಸಂಗತಿಗಳು ಕೂಡಿಸಲ್ಪಟ್ಟು ನೆಲೆಗೊಳ್ಳುತ್ತವೆ.[11]

ಆ “ಕ್ರೈಸ್ತರೆಂದು ಹೆಸರುಗೊಂಡವರ” ಬಗ್ಗೆ ಟ್ಯಾಸಿಟಸ್‌ನು ಅಸಹ್ಯಗೊಂಡಿದ್ದನೆಂದು ಅವನ ಬರಹಗಳು ತೋರಿಸುತ್ತವೆ, ಆದರೆ “ಕ್ರಿಸ್ಟಸ್”ನು “ದೇಶಾಧಿಪತಿ ಪೊಂತಿಯಸ್ ಪಿಲಾತನ ತೀರ್ಪಿನಿಂದ ಕೊಲ್ಲಲ್ಪಟ್ಟಿದ್ದನು ಎಂದು ದೃಢವಾಗಿ ನಂಬಿದ್ದನೆಂಬುದು ಸಹ ಸ್ಪಷ್ಟವಾಗುತ್ತದೆ.”

## ಸಿ. ಪ್ಲಿನಿಯಸ್ ಸೆಕುಂಡಸ್

ಇನ್ನೊಬ್ಬ ರೋಮನ್ ಬರಹಗಾರ, ಟ್ಯಾಸಿಟಸ್‌ನ ಸಮಕಾಲಿನ, ಬಿಥೂನಿಯದ ರಾಜಪಾಲ, ಸಿ. ಪ್ಲಿನಿಯಸ್ ಸೆಕುಂಡಸ್ ಆಗಿದ್ದನು. ಅವನನ್ನು ಅವನ ಪ್ರಿಸಿದ್ಧ ಚಿಕ್ಕಪ್ಪ ಅದೇ ಹೆಸರಿನವನಿಂದ ಭಿನ್ನವಾಗಿ ತಿಳಿಯಲು “ಚಿಕ್ಕವನು” ಎಂದು ಕರೆಯುತ್ತಿದ್ದರು. ಚಿಕ್ಕವನಾದ ಪ್ಲಿನಿಯು ತನ್ನ ಪ್ರಾಂತದಲ್ಲಿಯ ಅನೇಕ ಕ್ರೈಸ್ತರ ಬಗ್ಗೆ ಏನು ಮಾಡಬೇಕೆಂದು ಬುದ್ಧಿವಾದ ಕೇಳಿ, ಕ್ರಿ.ಶ. 112ರಲ್ಲಿ ಚಕ್ರವರ್ತಿ ಟ್ರಾಜನ್ನನಿಗೆ ಬರೆದನು.

ಅನ್ಯ ದೇವಾಲಯಗಳು ತ್ಯಜಿಸಲ್ಪಡುವದರೊಂದಿಗೆ, ಹಾಗೂ ಕ್ರೈಸ್ತರು ಕ್ರಿಸ್ತನ ಹೆಸರಿಗಾಗಿ ಶ್ರಮೆತಾಳಲು ಸಾಯಲು ಸಿದ್ಧರಾಗಿದ್ದಾಗ, ಬಹಳವಾಗಿ ಪ್ರಸಾರವಾಗಿದ್ದ "ಅಂಟು ಜಾಡ್ಯವನ್ನು" ಯೇಸುವಿನ ಬಗೆಗಿನ ದಂತ ಕಥೆಯು ಪ್ರಾರಂಭಿಸಿದೆ ಎಂದು ಪ್ಲಿನಿಯು ಯೋಚಿಸುವದು ಅಸಾಧ್ಯವಾಗಿತ್ತು. ಪ್ಲೀನಿಯ ಟಿಪ್ಪಣಿಗಳು ಕ್ರೈಸ್ತ ಪ್ರಭಾವದ ವಿಸ್ತರಣೆಯನ್ನು ಉದಾಹರಿಸುತ್ತದೆ: "ಈ ಅಂಧ ಶ್ರದ್ಧೆಯ ಜಾಡ್ಯವು ಪಟ್ಟಣಗಳಿಗೆ ಮಾತ್ರ ನೇಮಿತವಾಗಿಲ್ಲ, ಆದರೆ ಅದು ಗ್ರಾಮಗಳಿಗೆ, ಹಾಗೂ ಪಟ್ಟಣಗಳಿಗೂ ವಿಸ್ತರಿಸಲ್ಪಟ್ಟಿದೆ."[12]

## ಸ್ಯೂಟೋನಿಯಸ್

ಸ್ಯೂಟೋನಿಯಸ್‌ನು (65-135), ಟ್ಯಾಸಿಟಸ್‌ನ ಸಮಕಾಲೀನನೂ ಜೊತೆ ಇತಿಹಾಸಕಾರನೂ ಆಗಿದ್ದನು. ಕ್ರಿ.ಶ. 49ರಲ್ಲಿ ಕ್ಲಾಡಿಯಸ್ ಚಕ್ರವರ್ತಿಯು ತೆಗೆದು ಕೊಂಡ ಕಠಿಣವಾದ ಕ್ರಮವನ್ನು ಸುಮಾರು ಕ್ರಿ.ಶ. 120ರಲ್ಲಿ ಬರೆದನು: "ಕ್ರೆಸ್ಟುಸನ ಪ್ರಚೋದನೆಯಿಂದ ಯೆಹೂದ್ಯರು ಸತತವಾಗಿ ತೊಂದರೆಗಳನ್ನುಂಟು ಮಾಡುತ್ತಿದ್ದರಿಂದ, ಅವನು ಅವರನ್ನು ರೋಮ್ ಪಟ್ಟಣದಿಂದ ಹೊರಗೆ ಹಾಕಿದನು."[13] (ಟ್ಯಾಸಿಟಸ್‌ನು "ಕ್ರಿಸ್ಟುಸ್" ಎಂದು ಕರೆದವನನ್ನು[14] ಸ್ಯೂಟೋನಿಯಸ್‌ನು "ಕ್ರೆಸ್ಟುಸ್" ಎಂದು ಕರೆದನು.[15])

ಈ ಹೊರದಬ್ಬುವಿಕೆಯು ಕ್ಲಾಡಿಯೆಸ್‌ನ ಆಳಿಕೆಯ ಒಂಭತ್ತನೆಯ ವರ್ಷದಲ್ಲಿ ನಡೆಯಿತೆಂದು ಬರಹಗಾರನಾದ ಓರೊಸಿಯಸ್‌ನು ನಮೂದಿಸಿದ್ದಾನೆ. ವೆರ್ನ್ನರ ಕೆಲ್ಲರ್ ತೋಲಿಸುವಂತೆ, ಕ್ರೈಸ್ತ ಸಮಾಜವು "ಶಿಲುಬೆಯ ಕಾರ್ಯದನಂತರ ಹದಿನೈದರಿಂದ ಇಪ್ಪತ್ತು ವರ್ಷಗಳಿಗಿಂತ ಹೆಚ್ಚಿಲ್ಲದ"[16] ಅವಧಿಯಲ್ಲಿ ರೋಮ್‌ದಲ್ಲಿ ಇತ್ತೆಂದು ಅರ್ಥ ವಾಗುತ್ತದೆ.

ರೋಮನ್ ಯೆಹೂದಿ ವಸತಿಯಲ್ಲಿದ್ದ ನಂಬಿಕೆಯಿಡದ ಯೆಹೂದ್ಯರು ಕ್ರೈಸ್ತ ಯೆಹೂದ್ಯರನ್ನು ಹಿಂಸಿಸುತ್ತಿದ್ದರು. ಕ್ಲಾಡಿಯಸ್‌ನು ಬೇಸರಗೊಳ್ಳುವಂತೆ ಬಹಿರಂಗ ತೊಂದರೆಯನ್ನು ಅವರು ಎಬ್ಬಿಸಿದರು. ಅದಕ್ಕನುಗುಣವಾಗಿ, ಚಕ್ರವರ್ತಿಯು, ಈ ಸಂಗತಿಯನ್ನು ಯೆಹೂದ್ಯರ ಆಂತರಿಕ ದಂಗೆಯೆಂದು ನೋಡಿ, ಪ್ರತಿಯೊಬ್ಬ ಯೆಹೂದ್ಯನು ರೋಮನ್ನು ಬಿಟ್ಟು ಹೋಗುವಂತೆ ಆಜ್ಞಾಪಿಸಿದನು. ಆ ಅಸಂತುಷ್ಟ ಗುಂಪಿನಲ್ಲಿ ಅಕ್ವಿಲ ಮತ್ತು ಪ್ರಿಸ್ಕಿಲ್ ಇದ್ದರು. ಕೊರಿಂಥದಲ್ಲಿ ಸೌಲನು "ಪೊಂತದಲ್ಲಿ ಹುಟ್ಟಿದ ಅಕ್ವಿಲನೆಂಬ ಒಬ್ಬ ಯೆಹೂದ್ಯನನ್ನು ಕಂಡನು. ಯೆಹೂದ್ಯರೆಲ್ಲರೂ ರೋಮಾ ಪುರವನ್ನು ಬಿಟ್ಟು ಹೋಗಬೇಕೆಂದು ಕ್ಲೌದಿಯ ಚಕ್ರವರ್ತಿಯು ವಿಧಿಸಿದ ಕಾರಣ ಅಕ್ವಿಲನೂ ಅವನ ಹೆಂಡತಿಯಾದ ಪ್ರಿಸ್ಕಿಲ್ಲಳೂ ಕೆಲವು ದಿನಗಳ ಮುಂಚೆ ಇತಾಲ್ಯ ದೇಶದಿಂದ ಅಲ್ಲಿಗೆ ಬಂದಿದ್ದರು; ..." (ಅಪೊಸ್ತಲರ ಕೃತ್ಯಗಳು 18:2). ಯೇಸುವಿ ಮರಣದ ನಂತರ ಇಪ್ಪತ್ತು ವರ್ಷಗಳ ಬಳಿಗೆ ರೋಮ್‌ದಲ್ಲಿ ಕ್ರೈಸ್ತರ ದೊಡ್ಡ ಸಂಖ್ಯೆಯನ್ನು ಪ್ರತಿಬಿಂಬಿಸುವ ಈ ದುಃಖಕರವಾದ ಘಟನೆಯು "ಕ್ರೈಸ್ಟಸನು" ಎಂದೂ ಇರದಿದ್ದರೆ, ಸಂಭವಿಸುತ್ತಲೇ ಇರಲಿಲ್ಲ. ಸ್ಯೂಟೋನಿಯನ್‌ನ ಟಿಪ್ಪಣಿಯು ಯೇಸುವಿನ ಐತಿಹಾಸಿಕತೆಗೆ ವಿಷಯ ಸಂಬಂಧಿಸಿ ಹಾಗೂ ವಿರುದ್ಧ ಮೂಲದಿಂದ ಪುನಃ ರುಜುವಾತಾಗಿದೆ.[17]

## ಮುಕ್ತಾಯ

ಜೀವಿಸುವ, ಉಸಿರಾಡಿಸುವ, ಸಾಯುವ ಪ್ರಥಮ ಶತಮಾನದ ನಜರೇತಿನ ಯೇಸುವಿನ ಪರಿಣಾಮವು ಅಳಿಸಿ ಹಾಕಲ್ಪಡಲಾರದು, ಯಾಕಂದರೆ ಆತನು ಮಾಡಿದಂಥದ್ದು "ಒಂದು ಮೂಲೆಯಲ್ಲಿ ಮಾಡಲ್ಪಡಲಿಲ್ಲ" (ಅಪೊಸ್ತಲರ ಕೃತ್ಯಗಳು 26:26). ಕ್ರಿಸ್ತನ ಬಗ್ಗೆ ಬೇರೆ ಯಾವುದಾದರೂ ಆಕ್ರಮಿಸಲ್ಪಡ ಬಹುದು, ಆದರೆ ಆತನ ಸತ್ಯತೆಯು ಒಪ್ಪಿಕೊಳ್ಳಲ್ಪಡತಕ್ಕದ್ದು. "ಮಾಹಿತಿಯುಳ್ಳ ಯಾವುದೇ ಮನುಷ್ಯನು, ನೆಪೋಲಿಯನ್ ಬೋನಾಪಾರ್ಟ, ಓಲಿವರ ಕ್ರೂಮವೆಲ್, ಜೂಲಿಯಸ್ ಸೀಜರ ಅವರ ಅಸ್ತಿತ್ವದ ಬಗ್ಗೆ ಸಂಶಯಗೊಳ್ಳುವದಿಲ್ಲ" ಇಲ್ಲವೇ ನಜರೇತಿನ ಯೇಸುವಿನ ಬಗ್ಗೆ ಸಂಶಯಗೊಳ್ಳು ವದಿಲ್ಲ. "ಜೂಲಿಯಸ್‌ನು ಜೀವಿಸಿದನು, ಗೌಲದಲ್ಲಿ ಯುದ್ಧ ಮಾಡಿದನು, ರೋಮನ್ ಸೆನೇಟಿನಲ್ಲಿ ಕೊಲೆ ಮಾಡಲ್ಪಟ್ಟನು ಎಂಬ ಘಟನೆಗಳು ನಿಜವಾದ ಹಾಗೂ ಅಧಿಕೃತವಾದ ಚರಿತ್ರೆಗೆ ಒಳಪಟ್ಟಿವೆ ಎಂದು ಒಪ್ಪಿಕೊಳ್ಳಲ್ಪಟ್ಟಿವೆ; ಆದರೆ ಅವು ಆಧುನಿಕ ಸಮಯಗಳಿಗೆ ಬಹಳ ಸಮೀಪದಲ್ಲಿರುವದಿಲ್ಲ, ಇಲ್ಲವೇ ಅರ್ಧ ಚೆನ್ನಾಗಿ ಒಪ್ಪಿಕೊಳ್ಳಲ್ಪಟ್ಟಿರುವದಿಲ್ಲ. ಯೇಸುವು ಜೀವಿಸಿದನು, ಯೂದಾಯ ಮತ್ತು ಗಲಿಲಾಯದಲ್ಲಿ ತನ್ನ ಸುವಾರ್ತೆಯನ್ನು ಪ್ರಸಂಗಿಸಿದನು ಮತ್ತು ಕಲ್ವಾರಿಯ ಮೇಲೆ ಕ್ರೂಜಿಸಲ್ಪಟ್ಟನು ಎಂಬ ಸಂಗತಿಗಳಂತೆ ಅವು ಇರುವದಿಲ್ಲ."[18]

" 'ಕ್ರಿಸ್ತ - ದಂತಕಥೆ'ಯಂಥ ಆಧುನಿಕ ಸಿದ್ಧಾಂತಗಳು ಎಲ್ಲಾ ವೈಜ್ಞಾನಿಕ ಇತಿಹಾಸಕಾರರಿಂದ ತಿರಸ್ಕರಿಸಲ್ಪಟ್ಟಿವೆ" ಎಂದು ಫ್ರೆಡರಿಕ್ ಸಿ. ಗ್ರಾಂಟ ಹೇಳಿದ್ದಾರೆ.[19] ಒಬ್ಬ ಉಪನ್ಯಾಸಕನು ಈ ಹೇಳಿಕೆ ಕೊಟ್ಟಿದ್ದಾನೆ:

> ಆತನು [ಯೇಸುವು] ಎಂದೂ ಜೀವಿಸಿರಲಿಲ್ಲ, ಆತನ ಜೀವನದ ವಿಷಯಗಳು ಕಲ್ಪನೆಗಳಾಗಿವೆ ಎಂದು ಊಹಿಸುವುದು, ಸುವಾರ್ತೆಯ ಕಥೆಗಳ ಅವಶ್ಯವಾದ ಅಂಶಗಳನ್ನು ಘಟನೆಯಂತೆ ಸ್ವೀಕರಿಸುವದಕ್ಕಿಂತ ಹೆಚ್ಚಾಗಿ ಕಷ್ಟಕರವಾದದ್ದೂ ಚರಿತ್ರೆಕಾರನ ಮಾರ್ಗದಲ್ಲಿ ಹೆಚ್ಚು ಸಮಸ್ಯೆ ಗಳನ್ನು ಎಬ್ಬಿಸುವಂಥದ್ದೂ ಆಗಿದೆ.[20]

"ಕೆಲವು ಬರಹಗಾರರು 'ಕ್ರಿಸ್ತ - ದಂತಕಥೆಯ' ಸೋಗಿನೊಂದಿಗೆ ಆಟವಾಡಬಹುದು, ಆದರೆ ಐತಿಹಾಸಿಕ ಪುರಾವೆಯ ನೆಲೆಯ ಮೇಲೆ ಅವರು ಹಾಗೆ ಮಾಡಲಾರರು" ಎಂದು ಎಫ್. ಎಫ್. ಬ್ರೂಸ ಹೇಳಿದ್ದಾರೆ.[21]

"ಹೊಸ ಒಡಂಬಡಿಕೆಯ ಬರಹಗಾರರು ಎಂದೂ ಬರೆಯದಿದ್ದರೆ, ಹಾಗೂ ಪಿತೃಗಳು ಮುರಿಯದ ಮೌನದಿಂದ ಇದ್ದರೆ, ಈ ಹೊರಗಿನ ಮೂಲಗಳಿಂದ (ಅಂದರೆ, ಅವಿಶ್ವಾಸಿಗಳ ಹೇಳಿಕೆಗಳಿಂದ) ಕೂಡಿಸಲು ಶಕ್ತರಾಗುತ್ತಿದ್ದೆವು, ಮತ್ತು ಕ್ರೈಸ್ತತ್ವದ ಎಲ್ಲಾ ದೊಡ್ಡ ಸಂಗತಿಗಳನ್ನು ಸ್ವೀಕರಿಸಲು ಒತ್ತಾಯಿಸಲ್ಪಡುತ್ತಿದ್ದೆವು."[22] ಕ್ರೈಸ್ತತ್ವವು ಐತಿಹಾಸಿಕವಾಗಿ ತಳಹದಿಯುಳ್ಳದ್ದೂ ಭೌಗೋಳಿಕವಾಗಿ ನೆಲೆಗೊಂಡದ್ದೂ ಆಗಿದೆ. ಜೂಲಿಯಸ್ ಸೀಜರನಂತೆ ನಿಜವಾಗಿರುವಂತೆ ಯೇಸುವು ನಿಂತುಕೊಳ್ಳು ತ್ತಾನೆ. "ಮನುಷ್ಯ ಕುಮಾರನು ಯಾರಾಗಿದ್ದಾನೆಂದು ನೀವು ಹೇಳುತ್ತೀರಿ?" ಎಂಬ ಪ್ರಶ್ನೆಯೊಂದಿಗೆ ಅವನಿಗೆ ಗಟ್ಟಿಯಾದದ್ದೊಂದು ಇಲ್ಲಿದೆ.

ಟಿಪ್ಪಣಿಗಳು

[1]"ಹೊಸ ಒಡಂಬಡಿಕೆಯ ದಾಖಲೆಗಳ ಮೂಲ ನಂಬಿಗಸ್ತಿಕೆಗೆ ಯೋಗ್ಯತೆಯನ್ನು" ಆಹ್ವಾನಿಸಿದ ಒಂದು ಸಮಯವಿತ್ತು, ಆದರೆ ಆ ಸಮಯವು ಬಹಳ ಹಿಂದೆ ಶಾಶ್ವತವಾಗಿ ಹೊರಟು ಹೋಗಿದೆ (John H. Gerstner, *Reasons for Faith* [New York: Harper & Brothers, 1960], 86). [2]"ಯೇಸುವು ನಿಜವಾಗಿಯೂ ಎಂದೂ ಜೀವಿಸಿರಲೇ ಇಲ್ಲ, ಹಾಗೂ ಯೇಸುವಿನ ಕಥೆಯು ಮಾನವ ರೂಪದಲ್ಲಿ ಕೆಲವು ಸಮಯ ಭೂಲೋಕದ ಮೇಲೆ ಕಂಡು ಕೊಂಡ ಒಬ್ಬ ದೇವರ ಬಗೆಗಿನ ದಂತಕಥೆಯ ವಿಸ್ತರಣೆಯಾಗಿದೆ ಎಂದು 19ನೆಯ ಶತಮಾನದ ಅಂತ್ಯದಲ್ಲಿ ಗಂಭೀರವಾಗಿ ಕೆಲವು ಟೀಕಾಕಾರರದಿಂದ ಮುಂದಿಡಲ್ಪಟ್ಟ ವಿಚಾರವನ್ನು ವಿರೋಧಿಸಲು" ಕ್ರೈಸ್ತೇತರರ ಟಿಪ್ಪಣಿಗಳು ಸಹಾಯ ಮಾಡುತ್ತವೆ *(Encyclopaedia Britannica,* 1962 ed., s.v. "Jesus Christ," by Jaroslav Jan Pelikan). [3]Josephus *Antiquities* 18.3.3. [4]ಇಡೀ ಭಾಗವು ಮಧ್ಯೆಸೇರಿಸಲ್ಪಟ್ಟದ್ದು ಎಂದು ಅನೇಕ ಪಂಡಿತರು ಒಪ್ಪಿಕೊಳ್ಳುವಂತೆ ಕ್ರಿಸ್ತನ ಪರವಾಗಿ ಜೋಸೆಫಸನ ಹೇಳಿಕೆ ಇರುತ್ತದೆ. ಕೆಲವು ಪದಗಳನ್ನು ಮಧ್ಯೆ ಸೇರಿಸಿದವುಗಳನ್ನಾಗಿ ಮಾಡುವ ತೀರ್ಮಾನವು ಕಡಿಮೆ ಉಗ್ರವಾದದ್ದೂ ಆದರೆ ಅದೇ ಪರಿಣಾಮವುಳ್ಳದ್ದೂ ಆಗಿದೆ. (Joseph Klausner, *Jesus of Nazareth: His Life, Times, and Teaching,* trans. Herbert Danby [New York: Macmillan Co., 1929], 56). ಜೊಸೆಫಸನ ಬರಹಗಳ ಇನ್ನೂ ಇರುವ ಎಲ್ಲಾ ಪ್ರತಿಗಳಲ್ಲಿ ಇಡೀ ಭಾಗವಿದೆ ಮತ್ತು (ಯುಸೆಬಿಯಸನಿಂದ) ಕ್ರಿ.ಶ. 324ರಿಂದ ಭಾಗವು ಉಲ್ಲೇಖಿಸಲ್ಪಟ್ಟಿದೆ. ಪಠ್ಯದ ಪುರಾವೆಯನ್ನು ಸಂಬಂಧಿಸಿ ಈ ಭಾಗದಂತೆ ಜೊಸೆಫಸನ ಬರಹಗಳ ಯಾವುದೇ ಇತರ ಭಾಗವು ಸುಲಭವಾಗಿ ತಿರಸ್ಕರಿಸಲ್ಪಡಬಹುದು. ಸ್ವಂತದ ವಿವೇಚನೆ ಮಾತ್ರವೇ ಅದನ್ನು ತೆಗೆದು ಹಾಕಬಹುದು. The *New York Times* News Service, under a Jerusalem dateline, February 13, 1972, ಹತ್ತನೇ ಶತಮಾನದ ಅರಾಬಿಕ್ ಕೈಬರಹ ಪ್ರತಿಯ ಬಗ್ಗೆ ಹೇಳಿತು, ಅದರಲ್ಲಿ, ಈ ರೀತಿಯಲ್ಲಿ ಜೊಸೆಫಸನ ಪಠ್ಯಕ್ಕೆ ಭಿನ್ನತೆಯಿತ್ತು: "ಈ ಸಮಯದಲ್ಲಿ ಯೇಸು ಎಂದು ಕರೆಯಲ್ಪಟ್ಟ ಒಬ್ಬ ಬುದ್ಧಿವಂತ ಮನುಷ್ಯನಿದ್ದನು. ಮತ್ತು ಆತನ ನಡತೆಯು ಚೆನ್ನಾಗಿತ್ತು, ಹಾಗೂ (ಆತನು) ಸದ್ಗುಣವುಳ್ಳವನೆಂದು ತಿಳಿಯಲ್ಪಟ್ಟಿತ್ತು, ಮತ್ತು ಯೆಹೂದ್ಯರಲ್ಲಿ ಹಾಗೂ ಇತರ ಜನಾಂಗಗಳಲ್ಲಿ ಅನೇಕ ಜನರು ಆತನ ಶಿಷ್ಯರಾದರು. ಶಿಲುಬೆಗೆ ಹಾಕಲ್ಪಡಲು ಮತ್ತು ಸಾಯಲು ಪಿಲಾತನು ಆತನನ್ನು ದಂಡಿಸಿದನು. ಆತನ ಶಿಷ್ಯರಾದವರು ಆತನ ಶಿಷ್ಯತ್ವವನ್ನು ತ್ಯಜಿಸಿಬಿಡಲಿಲ್ಲ. ಆತನು ಶಿಲುಬೆಗೆ ಹಾಕಲ್ಪಟ್ಟ ಮೂರನೆಯ ದಿನದ ನಂತರ ಆತನು ಅವರಿಗೆ ಕಾಣಿಸಿಕೊಂಡನು ಮತ್ತು ಆತನು ಜೀವಂತನಾಗಿದ್ದಾನೆ ಎಂದು ಅವರು ವರದಿ ಮಾಡಿದರು; ಅದರ ಪ್ರಕಾರವಾಗಿ, ಬಹುಶ ಪ್ರವಾದಿಗಳು ಅದ್ಭುತಗಳುನ್ನು ಹೇಳಿದ ಮೆಸ್ಸೀಯನು ಆತನಾಗಿದ್ದಿರಬಹುದು." [5]Josephus *Antiquities* 20.9.1. [6]F. F. Bruce, *The New Testament Documents: Are They Reliable?* (Grand Rapids, Mich.: Wm. B. Eerdmans Publishing Co., 1954), 102. Bruce cited Klausner, *Jesus of Nazareth,* 18ff., and Maurice Goguel, *Life of Jesus,* 70ff., ಯೇಸುವಿನ ಐತಿಹಾಸಿಕತೆಯಲ್ಲಿ ಯೆಹೂದ್ಯರಿಗೆ ಸಂಪೂರ್ಣ ಭರವಸೆಯನ್ನು ತೋರಿಸುವದಕ್ಕಾಗಿ "ಒಬ್ಬ ವ್ಯಕ್ತಿ ಅಸ್ತಿತ್ವದಲ್ಲಿದ್ದನು, ಆತನ ಹೆಸರು ಯೇಸು ಇಲ್ಲವೇ ಕ್ರಿಸ್ತ ಎಂದಿತ್ತು," ಹಾಗೂ ಆತನು "ತಿಬೆರಿಯಸ್‌ನ ಆಳಿಕೆಯಲ್ಲಿ ಪಾಲೆಸ್ತೀನದಲ್ಲಿ ಶಿಲುಬೆಗೆ ಹಾಕಲ್ಪಟ್ಟನು" (Maurice Goguel, *Life of Jesus* [New York: Barnes & Noble, 1933; 3d impression, 1958], 70). [7]Thomas Hartwell Horner, *An Introduction to the Critical Study and Knowledge of the Holy Scriptures* (Philadelphia: E. Littell, 1831), 1:197. [8]Ibid. [9]ಯೇಸುವು *Ha-Taluy* "ನೇಣುಹಾಕಲ್ಪಟ್ಟವನು" ಹಾಗೂ *Ben Pantera* "ಕನ್ನಯಕೆಯ ಮಗನು" ಎಂದು ಕರೆಯಲ್ಪಟ್ಟನು. *Pantera* ಎಂಬ ಪದವು *Parthenos* "ಕನ್ನಿಕೆ" (Ibid.) ಎಂಬ ಗ್ರೀಕ ಪದ ಕೆಡಿಸುವಿಕೆಯಾಗಿದೆ. [10]*Euangelion* "ಸುವಾರ್ತೆ" ಎಂಬುದು *'Awen-gillayon* ಇಲ್ಲವೇ *'Awon-gillayon* ಎಂದು ಬದಲಾಯಿಸಲ್ಪಟ್ಟಿತು (Babylonian Talmud, tractate Shabbath, 116 a, b, quoted in F. F. Bruce, 102).

[11]Tacitus *Annals* 15.44, qoted in Bruce, 117. [12]C. Plinius Secundus *Epistles of Pliny* 10.97, quoted in J. W. McGarvey, *Evidences of Christianity,* Part 3

(Louisville: Guide Printing and Publishing Co., 1891), 12-14. [13]Seutonius *Life of Claudius* 25.4, quoted in Bruce, 118. [14]Tacitus *Annals* 15.44, quoted in Bruce, 117. [15]Horner, 1:200. [16]Werner Keller, *The Bible as History* (New York: William Morrow and Co., 1958), 379. [17]Seutonius also wrote of the Great Fire of Rome, and that Nero (64-68), Claudius'ನ ಉತ್ತರಾಧಿಕಾರಿಯು "ಶ್ರೇಷ್ಠವಾದ ಮತ್ತು ಕಿರುಕಳದ ಅಂಧವಿಶ್ವಾಸಕ್ಕೆ ಬಲಿಯಾದ ಜನರಾದ ಕ್ರೈಸ್ತರ ಗುಂಪಿನ ಮೇಲೆ" ದಂಡನೆ ವಿಧಿಸಿದನು (*Life of Nero,* 21.2, quoted in Bruce, 118). [18]J. L. Dagg, *The Evidences of Christianity* (Macon, Ga.: J. W. Burke and Co., 1869), 85, 90. [19]*Encyclopedia Americana,* s.v. "Jesus Christ," by Frederick C. Grant. [20]H. G. Wells, in N. B. Hardeman, *Dallas Lectures for 1943* (Dallas: Eugene Smith, 1943), 122.

[21]Bruce, 119. [22]Harvey W. Everest, *The Divine Demonstration* (St. Louis: Christian Board of Publication, 1884), 85.

© 2009 Truth for Today